ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1189/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 23.3.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ಸರ್ವೆ ನಂ.499 ರ 1.13 ಎಕರೆ ಹಾಗೂ 502 ರ ಬಿ.33 ಗುಂಟೆ ರಾಜಕಾಲುವೆಯನ್ನು ಒತ್ತುವರಿದಾರರಿಂದ ತೆರವುಗೊಳಿಸಿ, ಪುನ: ಅದನ್ನು ರಾಜಕಾಲುವೆ ಆಗಿ ಇಟ್ಟು, ಪುರಸಭೆಗೆ ಹಸ್ತಾಂತರಿಸಲು ಸೂಕ್ತ ಕ್ರಮಕ್ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಆರ್. ಮುನಿಶಾಮಪ್ಪ, ತಂದೆ ರಾಮಯ್ಯ, ನಾರಾಯಣನಾಯಕನ ತೋಟ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಕಸಬಾ ಸರ್ವೆ ನಂ.499 ಬಿ.1 ಎಕರೆ 13 ಗುಂಟೆ ಮತ್ತು ಸ.ನಂ.502 ಬಿ.33 ಗುಂಟೆ ಇದು ರಾಜಕಾಲುವೆಯಾಗಿದ್ದು, 1993ನೇ ಇಸವಿಯಿಂದ ಈ ರಾಜಕಾಲುವೆಯನ್ನು ಅತಿಕ್ರಮ ಪ್ರವೇಶಮಾಡದಂತೆ ಹಾಗೂ ಅಕ್ರಮ ಕಟ್ಟಡಗಳನ್ನು ಕಟ್ಟುವುದನ್ನು ತಡೆಯಬೇಕೆಂದು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದರೂ ಸಹಾ ರಾಜಕೀಯ ದುರುದ್ದೇಶದಿಂದ ಯಾವುದೇ ಕ್ರಮಕ್ಕೈಗೊಳ್ಳದೇ ಹಂತಹಂತವಾಗಿ ರಾಜಕಾಲುವೆ ಒತ್ತುವರಿ ಮಾಡಿಕೊಂಡು ಬಂದಿರುತ್ತಾರೆ. ಈಗ ರಾಜಕಾಲುವೆ ಸಂಪೂರ್ಣ ಮುಚ್ಚಿಹೋಗಿದ್ದು. ಇಲ್ಲಿ ಮನೆಗಳನ್ನು

ಕಟ್ಟಲು ಕಂದಾಯ ಇಲಾಖೆಯವರು ಸಹಕರಿಸಿರುತ್ತಾರೆ. ದಿ.16.12.2013ರಂದು ತಹಶೀಲ್ದಾರರಿಗೆ ಹಾಗೂ ಪೋಲೀಸರಿಗೆ ಪತ್ರ ಬರೆದು ಇದನ್ನು ರಕ್ಷಣೆ ಮಾಡುವಂತೆ ಕೇಳಿಕೊಂಡರೂ ಸಹಾ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ರಾಜಕಾಲುವೆ ರಕ್ಷಿಸಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 499 ಮತ್ತು 502 ರ ಸರ್ವೆ ನಂಬರುಗಳ ನಕ್ಷೆಯನ್ನು ತಯಾರಿಸಿ ಪುರಸಭೆಗೆ ಸಲ್ಲಿಸಲಾಗಿದ್ದು, ಆದ್ದರಿಂದ ಈ ಪ್ರಶ್ನಿತ ರಾಜಕಾಲುವೆ 2ನೇ ಎದುರುದಾರರ ವ್ಯಾಪ್ತಿಗೆ ಬರುತ್ತಿದ್ದು, ಆ ಬಗ್ಗೆ ಕ್ರಮಕೈಗೊಳ್ಳುವಂತೆ ಅವರಿಗೆ ತಿಳಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.306.2014ರಂದು ನಿವೃತ್ತಿಯಾಗಿದ್ದು, ದಿ.25.4.2014ರಂದು ಈ ದೂರನ್ನು ಸಲ್ಲಿಸಿರುತ್ತಾರೆ. 1993ರಿಂದಲೂ ಈ ರಾಜಕಾಲುವೆ ಅತಿಕ್ರಮಣ ತಡೆಗಟ್ಟುವಂತೆ ಅರ್ಜಿ ಸಲ್ಲಿಸಿರುವುದಾಗಿ ದೂರುದಾರರು ಉಲ್ಲೇಖಿಸಿರುತ್ತಾರೆ. ಆದ್ದರಿಂದ ತನ್ನ ಅವಧಿಯಲ್ಲಿ ದೂರು ಸಲ್ಲಿಸದ ಕಾರಣ ತಾನು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

6. ದೂರುದಾರರು ಹಾಜರುಪಡಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ಇತರ ದಾಖಲಾತಿಗಳನ್ನು ಪರಿಶೀಲಿಸಿದಾಗ, ದೇವನಹಳ್ಳಿ ಪಟ್ಟಣದ ವಾರ್ಡ್ ನಂ.9ರ 499 ಮತ್ತು 502 ಸರ್ವೆ ನಂಬರುಗಳ ಕ್ಷೇತ್ರ ಕ್ರಮವಾಗಿ 1.13 ಎಕರೆ ಹಾಗೂ 33 ಗುಂಟೆ, ಇವುಗಳು ರಾಜಕಾಲುವೆ ವಾಪ್ತಿಯಲ್ಲಿರುವುದರಿಂದ ಇದನ್ನು ರಾಜಕಾಲುವೆಯಾಗಿ ಉಳಿಸಿಕೊಂಡು ಬೇರೆ ಯಾರೂ ಅತಿಕ್ರಮಿಸದಂತ ನೋಡಿಕೊಳ್ಳುವ ಜವಾಬ್ದಾರಿ ಎದುರುದಾರರದ್ದಾಗಿರುತ್ತದೆ. 1993ರಿಂದ ದೂರುದಾರರು ಈ ರಾಜಕಾಲುವೆಯನ್ನು ರಕ್ಷಿಸುವಂತೆ ಸಂಬಂಧಿಸಿದವರಿಗೆ ಅರ್ಜಿ ಸಲ್ಲಿಸಿದ್ದರೂ ಸಹಾ ಇದುವರೆಗೆ ಯಾರೂ ಕ್ರಮಕೈಗೊಳ್ಳದಿರುವುದು ಕಂಡುಬರುತ್ತದೆ. 1ನೇ ಎದುರುದಾರರು ಈ ರಾಜಕಾಲುವೆ ಪುರಸಭೆ ವ್ಯಾಪ್ತಿಗೆ ಬರುವುದರಿಂದ 2ನೇ ಎದುರುದಾರರು ಕ್ರಮಕೈಗೊಳ್ಳಬೇಕಾಗಿದೆಯೆಂದು ತಿಳಿಸಿರುತ್ತಾರೆ. ಅದೇ ರೀತಿ 2ನೇ ಎದುರುದಾರರು ತಾನು ನಿವೃತ್ತಿ ಹೊಂದುವ 1 ತಿಂಗಳ ಪೂರ್ವದಲ್ಲಿ

ಮಾತ್ರ ಈ ದೂರು ಸಲ್ಲಿಸಿರುವದರಿಂದ ತನಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಒಟ್ಟಿನಲ್ಲಿ ಸರ್ವೆ ನಂ.499 ರ 1.13 ಎಕರೆ ಹಾಗೂ 502 ರ ಖಿ.33 ಗುಂಟೆ ರಾಜಕಾಲುವೆಯನ್ನು ಒತ್ತುವರಿದಾರರಿಂದ ತೆರವುಗೊಳಿಸುವುದು ಅವಶ್ಯಕವಾಗಿದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಕಸಬಾ ಸ. ನಂ: ಸರ್ವೆ ನಂ.499 ರ 1.13 ಎಕರೆ ಹಾಗೂ 502 ರ 33 ಗುಂಟೆ ರಾಜಕಾಲುವೆಯನ್ನು ಒತ್ತುವರಿದಾರರಿಂದ ತೆರವುಗೊಳಿಸಿ, ಪುರಸಭೆಯ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27/3/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

25/3